**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೧೮.೦೨.೨೦೧೪ರಂದು ನಡೆದ ಪ್ರಶಾಸನ ಸಮಿತಿ ೧೯ನೇ (ವಿಶೇಷ) ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೧೯ನೇ (ವಿಶೇಷ) ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ ೧೮, ೨೦೧೪ರ ಮಂಗಳವಾರ ಪೂರ್ವಾಹ್ನ ೧೧.೩೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೫. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |
| ೬. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ, ಕಸಂವಿ | ಸದಸ್ಯರು |
| ೭. | **ವಿದ್ವಾನ್ ಪಿ.ಆರ್. ಪಾಗೋಜಿ,** ಉಪ ಕುಲಸಚಿವರು | ಪ್ರತ್ಯಾಯೋಜಿತ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಜಂಟಿ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೧. | **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ದಿನಾಂಕ: ೧೭.೦೨.೨೦೧೪ರಂದು ನಡೆದ ಪತ್ರವನ್ನು ಸಭೆಯ ಮುಂದೆ ಮಂಡಿಸಲಾಯಿತು. ಕರ್ನಾಟಕ ರಾಜ್ಯಪಾಲರ ಸಚಿವಾಲಯದ ರಾಜ್ಯಪಾಲರ ಕಾರ್ಯದರ್ಶಿಗಳು ದಿನಾಂಕ: ೧೭.೦೨.೨೦೧೪ರಂದು ಮಧ್ಯಾಹ್ನ ೧೨.೧೦ರಲ್ಲಿ ದೂರವಾಣಿ ಕರೆ ಮಾಡಿ ಪ್ರಶಾಸನ ಸಮಿತಿ ಸಭೆ ನಡೆಸುವ ಬಗೆಗೆ ಮಾಹಿತಿಯನ್ನು ತಿಳಿದು, ಸಭೆ ನಡೆಸಲು ಮೌಖಿಕ ಒಪ್ಪಿಗೆಯನ್ನು ನೀಡಿದರು. ಈ ಹಿಂದೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ದೂರವಾಣಿ ಕರೆ ಮಾಡಿ ಸಭೆಯನ್ನು ಮುಂದೂಡುವಂತೆ ತಿಳಿಸಿದಾಗ, ಸಭೆಯಲ್ಲಿ ಸಾಮಾನ್ಯ ವಿಷಯಗಳನ್ನು ಹಾಗೂ ಕೆಲವು ತುರ್ತು ವಿಷಯಗಳನ್ನು ಚರ್ಚಿಸುವ ಸಲುವಾಗಿ ಸಭೆ ಕರೆಯುವುದು ಅವಶ್ಯವಿದೆ ಎಂದು ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ಈ ಎಲ್ಲಾ ಅಂಶವನ್ನು ಸಭೆಯು ವಿವರವಾಗಿ ಕೇಳಿ ಸಭೆ ನಡೆಸಲು ಒಪ್ಪಿಗೆ ನೀಡಿತು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹದಿನೆಂಟನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 28.01.2014ರಂದು ನಡೆದ ಪ್ರಶಾಸನ ಸಮಿತಿ ಹದಿನೆಂಟನೆಯ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ವಿದ್ವಾನ್ ಕೆ.ಎಲ್. ರಾಘವ ಅವರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ವೇತನಶ್ರೇಣಿ ನಿಗದಿಪಡಿಸಲು ಕ್ರಮಕೈಗೊಳ್ಳಲಾಗಿದೆ. **ಅಧ್ಯಕ್ಷರ ಅಪ್ಪಣೆ ಮೇರೆಗೆ** ಚರ್ಚಿತವಾದ **ವಿಷಯ ಸಂಖ್ಯೆ 1**ಕ್ಕೆ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿವೇತನ ನೀಡಲು ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ತೃತೀಯ ದೀಕ್ಷಾಂತ ಘಟಿಕೋತ್ಸವದ ಅಧಿಸೂಚನೆಯನ್ನು ಹೊರಡಿಸಿ ವಿದ್ಯಾರ್ಥಿಗಳಿಂದ ಘಟಿಕೋತ್ಸವ ಪ್ರಮಾಣಪತ್ರದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: ಯುಜಿಸಿ ವೇತನಶ್ರೇಣಿಯ ಸಹ ಪ್ರಾಧ್ಯಾಪಕರ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 26.05.2013ರಂದು ನಡೆದ ಪ್ರಶಾಸನ ಸಮಿತಿ 14ನೇ ಸಭೆಯ ಅನುಮೋದನೆಯಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸೃಜಿಸಿರುವ **ಬೋಧಕ ಹುದ್ದೆ**ಗಳ ಪೈಕಿ ಯುಜಿಸಿ ವೇತನಶ್ರೇಣಿಯ 06 ಸಹ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ದಿನಾಂಕ: 30.05.2013ರಂದು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸಹ ಪ್ರಾಧ್ಯಾಪಕ ಹುದ್ದೆಗೆ ಸಲ್ಲಿಸಿದ ಅಭ್ಯರ್ಥಿಗಳ ಅರ್ಜಿಗಳ ಪರಿಶೀಲನಕಾರ್ಯ ಮುಕ್ತಾಯಗೊಂಡಿದ್ದು, ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 2014ರ ಫೆಬ್ರವರಿ 10 ಮತ್ತು 11ರಂದು ಮೂಲ ದಾಖಲೆಗಳ ಪರಿಶೀಲನೆ ಹಾಗೂ ಸಂದರ್ಶನವನ್ನು ನಡೆಸಲಾಯಿತು. ಈ ಆಯ್ಕೆ ಸಮಿತಿಯ ನಿರ್ಣಯವನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯು ಸರ್ಕಾರದಿಂದ ಬಂದ ಪತ್ರವನ್ನು ಪರಿಶೀಲಿಸಿತು. ಈ ಸಂಬಂಧವಾಗಿ ವಿಧಾನಮಂಡಲದ ಅಧಿವೇಶನ ಮುಗಿದ ನಂತರ ಪ್ರಶಾಸನ ಸಮಿತಿ ಸಭೆ ಕರೆಯಲು ಅನುಮೋದಿಸಿತು.**

**ವಿಷಯ 3: ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 11.11.2013ರಂದು ನಡೆದ ಪ್ರಶಾಸನ ಸಮಿತಿ ಹದಿನೇಳನೇ ಸಭೆಯ ನಿರ್ಣಯದಂತೆ ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿದ್ದ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ (ಬ್ಯಾಕ್‌ಲಾಗ್) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 2014ರ ಫೆಬ್ರವರಿ 13ರಂದು ಸಂದರ್ಶನವನ್ನು ನಡೆಸಲಾಗುತ್ತಿದೆ. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸರ್ಕಾರದಿಂದ ಬಂದ ಪತ್ರವನ್ನು ಪರಿಶೀಲಿಸಿತು. ಈ ಸಂಬಂಧವಾಗಿ ವಿಧಾನಮಂಡಲದ ಅಧಿವೇಶನ ಮುಗಿದ ನಂತರ ಪ್ರಶಾಸನ ಸಮಿತಿ ಸಭೆ ಕರೆಯಲು ಅನುಮೋದಿಸಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**ವಿಷಯ 1: ಯುಜಿಸಿ ವೇತನಶ್ರೇಣಿಯ ಸಹಪ್ರಾಧ್ಯಾಪಕ ಮತ್ತು ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಲು ಉಪಕುಲಸಚಿವರನ್ನು ಪ್ರತ್ಯಾಯೋಜಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಯುಜಿಸಿ ವೇತನಶ್ರೇಣಿಯ ಸಹಪ್ರಾಧ್ಯಾಪಕ ಮತ್ತು ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ಸಂದರ್ಶನಕ್ಕೆ ಸಂಬಂಧಿಸಿದ ಎಲ್ಲ ಬಗೆಯ ಪತ್ರವ್ಯವಹಾರ ಮತ್ತು ಇತರೆ ಪೂರಕ ಪ್ರಕ್ರಿಯೆಗಳನ್ನು ನಡೆಸಲು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 17(4)(ಅ) ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ 16(1)ರಲ್ಲಿ ಪ್ರದತ್ತವಾಗಿರುವ ಕುಲಪತಿಗಳ ವಿವೇಚನಾಧಿಕಾರದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಸಚಿವರಾದ ವಿದ್ವಾನ್ ಪಿ.ಆರ್. ಪಾಗೋಜಿ ಅವರನ್ನು ಪ್ರತ್ಯಾಯೋಜಿಸಲಾಗಿತ್ತು. ಇವರನ್ನು ಪ್ರತ್ಯಾಯೋಜಿಸಿರುವುದನ್ನು ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯು 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000' ಮತ್ತು 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ಗಳಲ್ಲಿ ಪ್ರಸ್ತಾಪಿತಗೊಂಡಿರುವ ಅಂಶಗಳನ್ನು ಪರಿಶೀಲಿಸಿತು. ಮಾನ್ಯ ಕುಲಪತಿಗಳ ವಿವೇಚನಾಧಿಕಾರದ ಹಿನ್ನೆಲೆಯಲ್ಲಿ ಉಪಕುಲಸಚಿವರನ್ನು ಪ್ರತ್ಯಾಯೋಜಿತ ಕ್ರಮಕ್ಕೆ ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು. ದಿನಾಂಕ: 18.02.2014ರಂದು ನಡೆಯುತ್ತಿರುವ ಪ್ರಶಾಸನ ಸಮಿತಿ 19ನೇ ಸಭೆಯ ಪ್ರತ್ಯಾಯೋಜಿತ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಸಭೆ ಒಪ್ಪಿಗೆ ನೀಡಿತು.**

**ವಿಷಯ 2: ಕುಲಸಚಿವರು ಕಾರ್ಯಾಲಯದ ಮಹತ್ವದ ಕಡತಗಳಲ್ಲಿ ಕುಲಪತಿಗಳ ಆದೇಶಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು ಹಾಗೂ ಪ್ರಶಾಸನ ಸಮಿತಿಯ ನಿರ್ಣಯಗಳನ್ನು ಜಾರಿಗೆ ತರದಿರುವ ಬಗೆಗೆ.**

ಟಿಪ್ಪಣಿ: ಪ್ರೊ. ಪಿ.ಬಿ. ಸಂತಪ್ಪನವರ ಅವರು ದಿನಾಂಕ: 05.10.2013ರಂದು ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕಾತಿಗೊಂಡರು. ಅವರು ನೇಮಕಗೊಂಡ ನಂತರ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ವಿಫಲಗೊಂಡಿವೆ. ವಿಶ್ವವಿದ್ಯಾಲಯದ ಕಾರ್ಯಪ್ರಗತಿಗಳು ಕುಂಠಿತಗೊಂಡಿವೆ. ಈ ಅಂಶಗಳನ್ನು ಮೂರು ಹಂತಗಳಲ್ಲಿ ಪರಿಶೀಲಿಸಬಹುದು.

1. **ಪ್ರಶಾಸನ ಸಮಿತಿ ನಿರ್ಣಯಗಳನ್ನು ಪಾಲಿಸದೇ ಇರುವುದು**

   ದಿನಾಂಕ: 11.11.2013ರಂದು ನಡೆದ ಪ್ರಶಾಸನ ಸಮಿತಿ ಹದಿನೇಳನೇ ಸಭೆ ಮತ್ತು ದಿನಾಂಕ: 28.01.2014ರಂದು ನಡೆದ ಪ್ರಶಾಸನ ಸಮಿತಿ ಹದಿನೆಂಟನೇ ಸಭೆಗಳ ನಿರ್ಣಯಗಳನ್ನು ಯುಕ್ತರೀತಿಯಿಂದ ಪಾಲಿಸದೇ, ಕಡತಗಳಲ್ಲಿ ಅನಿರ್ಣಯಗೊಳಿಸುವ ಅಂಶಗಳನ್ನು ಬರೆದು, ತನಗೆ ಈ ವಿಷಯದಲ್ಲಿ ಸಮ್ಮತವಿಲ್ಲವೆಂದು ತಿಳಿಸುವುದು –ಇದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ, 2009ರ ಪರಿಚ್ಛೇದ 16(4)ರಲ್ಲಿ ಉಕ್ತವಾಗಿರುವ ಕುಲಸಚಿವರ ಕರ್ತವ್ಯಪಾಲನೆಗೆ ವಿರುದ್ಧವಾಗಿ ವರ್ತಿಸುತ್ತಿರುವುದನ್ನು ಸೂಚಿಸುತ್ತದೆ. ಇದರಿಂದಾಗಿ, ಅನೇಕ ಮಹತ್ವದ ಹಾಗೂ ಸಾಮಾನ್ಯ ವಿಚಾರಗಳನ್ನು ಅನ್ಯೋನ್ಯೋಪಕ್ರಮಗಳಲ್ಲಿ ಕ್ರಮವಹಿಸುತ್ತಿರುವುದು ನೇರವಾಗಿ ಕಾಣುತ್ತಿದೆ.

2. **ಕುಲಪತಿಗಳ ಆದೇಶ ಮತ್ತು ಸೂಚನೆಗಳನ್ನು ಪಾಲಿಸದಿರುವುದು**

ಕುಲಸಚಿವರು, ಕೇವಲ ಕುಲಪತಿಗಳ ಹಾಗೂ ಪ್ರಶಾಸನ ಸಮಿತಿ, ಪ್ರಶಿಕ್ಷಣ ಪರಿಷತ್ತು ನಿರ್ಣಯಗಳನ್ನು ಯಥಾವತ್ತಾಗಿ ಪಾಲಿಸುವುದು ಕಾಯ್ದೆಬದ್ಧ ಕ್ರಮವಾಗಿದೆ. ಆದರೆ, ಕುಲಪತಿಗಳು ಅನೇಕ ಕಡತಗಳಲ್ಲಿ ನೀಡಿದ ಆದೇಶಗಳನ್ನು ಧಿಕ್ಕರಿಸಿ, ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿರುವುದು. ಇದರಿಂದಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳ ಸ್ಥಾನಾಪನ್ನದ ಸಮಸ್ಯೆ ಉಂಟಾಗಿ, ಅದರ ವ್ಯತಿರಿಕ್ತ ಪರಿಣಾಮ ವಿಶ್ವವಿದ್ಯಾಲಯದ ಮೇಲೆ ಆಗುತ್ತಿದೆ. ಉದಾಹರಣೆಗೆ, ಯುಜಿಸಿ ವೇತನಶ್ರೇಣಿಯ ಸಹ ಪ್ರಾಧ್ಯಾಪಕ ಹುದ್ದೆ ನೇಮಕಾತಿ ಕಡತ ಹಾಗೂ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ (ಬ್ಯಾಕ್‌ಲಾಗ್) ಹುದ್ದೆ ನೇಮಕಾತಿ ಕಡತಗಳಲ್ಲಿ ಕುಲಪತಿಗಳು ನೀಡಿದ ಸೂಚನೆ ಹಾಗೂ ಆದೇಶಗಳನ್ನು ಪಾಲಿಸದೇ, ಕುಲಪತಿಗಳ ನಿರ್ದೇಶನಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿರುವುದು. ಜ್ಯೋತಿಶ್ಶಾಸ್ತ್ರಕ್ಕೆ ಸಂಬಂಧಿಸಿದಂತೆ ಕುಲಪತಿಗಳು ರಚಿಸಿದ್ದ 'ಅಧ್ಯಯನ ಮಂಡಳಿ ಸಮಿತಿ'ಯನ್ನು ತಿರುಚಿ ಪ್ರತ್ಯೇಕವಾಗಿ ಸದಸ್ಯರನ್ನು ಸೇರಿಸಿ ಆದೇಶ ಹೊರಡಿಸಿರುವುದು.

3. **ಅಶಿಸ್ತಿನ ಚಟುವಟಿಕೆಗಳು**

ವಿಶ್ವವಿದ್ಯಾಲಯದ ನಿಗದಿತ ಕೆಲಸ–ಕಾರ್ಯಗಳಲ್ಲಿ ಗಮನವಹಿಸದೇ, ಬಾಹ್ಯಜನರ ಗುಂಪುಚಟುವಟಿಕೆಗಳಲ್ಲಿ ಭಾಗವಹಿಸಿ ವಿಶ್ವವಿದ್ಯಾಲಯದ ಘನತೆಗೆ ಕುಂದನ್ನು ತರುತ್ತಿರುವುದು. ಈ ಸಂಬಂಧವಾಗಿ ಕುಲಪತಿ ಹಾಗೂ ಇತರೆ ಅಧಿಕಾರಿಗಳ ವಿರುದ್ಧ ದುಷ್ಪಕೂಟದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವುದು ಮತ್ತು ಕುಲಪತಿಗಳ ವಿರುದ್ಧ ವಾಚಾಮಗೋಚರವಾಗಿ ಮಾತನಾಡುತ್ತಿರುವುದು. ಕುಲಪತಿಯ ಕೈಕೆಳಗೆ ಕಾರ್ಯನಿರ್ವಹಿಸುತ್ತಿರುವ ಕುಲಸಚಿವರು ತಮ್ಮ ಅಧಿಕಾರದ ವ್ಯಾಪ್ತಿಯನ್ನು ಮೀರಿ ನಡೆಯುತ್ತಿರುವುದು. ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಸಮಸ್ಯೆಯನ್ನು ಉಂಟುಮಾಡುತ್ತಿರುವುದು.

ನಿರ್ಣಯ: **ಪ್ರಶಾಸನ ಸಮಿತಿ ನಿರ್ಣಯಗಳನ್ನು ಪಾಲಿಸದಿರುವುದು, ಕುಲಪತಿಗಳ ಆದೇಶ ಮತ್ತು ಸೂಚನೆಗಳನ್ನು ಪಾಲಿಸದೆ, ಅಶಿಸ್ತಿನ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಪ್ರಶಾಸನ ಸಮಿತಿಯು ಗಂಭೀರವಾಗಿ ಪರಿಗಣಿಸಬೇಕೆಂದು ಎಲ್ಲ ವಿಷಯಗಳನ್ನು ಸಾಧಾರವಾಗಿ ಕಡತಗಳ ಮೂಲಕ ಮಾನ್ಯ ಕುಲಪತಿಗಳು ಸಭೆಯ ಮುಂದೆ ಮಂಡಿಸಿದರು. ಕುಲಸಚಿವರು ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಗ್ರಾಮದಲ್ಲಿ ಸರ್ಕಾರದಿಂದ ಮಂಜೂರಾಗಿರುವ 100 ಎಕರೆ ಜಮೀನನ್ನು ವಿಶ್ವವಿದ್ಯಾಲಯದ ವಶಕ್ಕೆ ಪಡೆಯದಿರುವುದು, ಮೈಸೂರಿನ ಘಟಕ ಕಾಲೇಜಿನ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಾಮಗಾರಿಪೂರ್ವ ನೆರವೇರಿಸಬೇಕಾದ ಕಾರ್ಯಗಳನ್ನು ಕಳೆದ ಮೂರು ತಿಂಗಳಿನಿಂದಲೂ ಮಾಡದಿರುವುದು, ಸರ್ಕಾರದ ಅನುದಾನ ಬಿಡುಗಡೆಗೆ ಸ್ಪಂದಿಸದಿರುವುದು, ಅನುದಾನಿತ ಪಾಠಶಾಲೆ ಹಾಗೂ ಕಾಲೇಜುಗಳ ಬ್ಯಾಕ್‌ಲಾಗ್ ಹುದ್ದೆಗಳ ನೇಮಕದ ಬಗ್ಗೆ, ಸಕಾಲ ಯೋಜನೆ ಅನುಷ್ಠಾನ, ಪದವಿ ತರಗತಿಗಳಿಗೆ ಹೊಸ ಪಠ್ಯಕ್ರಮ ರೂಪಿಸದೇ ಇರುವ ಬಗೆಗೆ, ವಿಶ್ವವಿದ್ಯಾಲಯದ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಕ್ರಮ ಜರುಗಿಸದಿರುವುದು, ಜಾಲತಾಣವನ್ನು ಅಪ್‌ಡೇಟ್ ಮಾಡದಿರುವುದು, 2014–15ನೇ ಸಾಲಿಗೆ ಸರ್ಟಿಫಿಕೇಟ್ ಕೋರ್ಸ್ ಮಾಡದಿರುವುದು –ಇವೇ ಮುಂತಾದ ಕೆಲಸ–ಕಾರ್ಯಗಳನ್ನು ಅಲಕ್ಷ್ಯ, ಬೇಜವಾಬ್ದಾರಿ, ಅರೆತಿಳಿವಳಿಕೆ ಇರುವುದನ್ನು ಸಭೆಯು ಗಮನಿಸಿತು. ಈ ಎಲ್ಲಾ ವಿವರಗಳನ್ನು ಸೂಕ್ತರೀತಿಯ ದಾಖಲೆಗಳ ಸಹಿತ ಘನತೆವೆತ್ತ ರಾಜ್ಯಪಾಲರ ಹಾಗೂ ಉನ್ನತ ಶಿಕ್ಷಣ ಇಲಾಖೆ ಸಚಿವರ ಗಮನಕ್ಕೆ ತರಲು ಸಭೆಯಲ್ಲಿ ಉಪಸ್ಥಿತರಿದ್ದ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾದ ಡಾ. ಎಸ್.ಆರ್. ಲೀಲಾ ಮತ್ತು ಘನತೆವೆತ್ತ ರಾಜ್ಯಪಾಲರ ನಾಮನಿರ್ದೇಶಿತ ಸದಸ್ಯರಾದ ಪಂ. ಜಯತೀರ್ಥಾಚಾರ್ಯ ಮಳಗಿ ಮತ್ತು ಪ್ರೊ. ಎನ್. ಅಶ್ವತ್ಥಮ್ಮ ಹಾಗೂ ಇತರೆ ಸದಸ್ಯರು ಸೂಚಿಸಿ ಅನುಮೋದಿಸಿದರು.**

**ವಿಷಯ 3: ಹಣಕಾಸು ಅಧಿಕಾರಿಗಳ ಸ್ವಂತ ವಾಹನಕ್ಕೆ ಇಂಧನ ವೆಚ್ಚವನ್ನು ಭರಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಈವರೆಗೂ ಹಣಕಾಸು ಅಧಿಕಾರಿಗಳ ನೇಮಕವಾಗಿರುವುದಿಲ್ಲ. ಹೀಗಾಗಿ, ವಿಶ್ವವಿದ್ಯಾಲಯದ ಉಪಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ವಾನ್ ಪಿ.ಆರ್. ಪಾಗೋಜಿ ಅವರಿಗೆ ಹಣಕಾಸು ಅಧಿಕಾರಿಗಳ ಹೆಚ್ಚುವರಿ ಪ್ರಭಾರವನ್ನು ನೀಡಲಾಗಿದ್ದು, ಅವರು ಕಾರ್ಯಾಲಯದ ಕೆಲಸ–ಕಾರ್ಯಗಳಿಗಾಗಿ ಓಡಾಡಲು ತಮ್ಮ ಸ್ವಂತ ವಾಹನವನ್ನು ಬಳಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿದ್ವಾನ್ ಪಿ.ಆರ್. ಪಾಗೋಜಿ ಅವರು ಬಳಸುತ್ತಿರುವ ಸ್ವಂತ ವಾಹನಕ್ಕೆ ಕಛೇರಿ ಕೆಲಸಗಳಿಗಾಗಿ ಓಡಾಡುವ ಸಂದರ್ಭಗಳಿಗಾಗಿ ಇಂಧನ ವೆಚ್ಚವಾಗಿ ರೂ. 5000/–ಗಳ ಪರಿಮಿತಿಯಲ್ಲಿ ಬಳಸಬೇಕು. 2012ರ ಡಿಸೆಂಬರ್‌ನಿಂದ 2014ರ ಜನವರಿ ತಿಂಗಳವರೆಗೆ ಮಾಹೆಯಾನ ರೂ. 5000/–ಗಳನ್ನು ನೀಡಲಾಗುತ್ತಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ಹಣಕಾಸು ಅಧಿಕಾರಿಯು ಶಾಸನಬದ್ಧ ಹುದ್ದೆಯನ್ನು ಹೊಂದಿದ್ದು, ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಹಣಕಾಸು ಅಧಿಕಾರಿಗೆ ಪ್ರತ್ಯೇಕ ವಾಹನ ವ್ಯವಸ್ಥೆ ಇರುವುದನ್ನು ಸಭೆಯು ಗಮನಿಸಿತು. ನಿಯಮಾನುಸಾರ ರೂ. 5000/–ಗಳ ಪರಿಮಿತಿಯೊಳಗೆ ಈಗಾಗಲೇ ಪಾವತಿಸಿರುವ ಮೊತ್ತಕ್ಕೂ ಮುಂದೆ ಪಾವತಿಸಬಹುದಾದ ಇಂಧನ ವೆಚ್ಚಕ್ಕೂ ಸಭೆಯು ಅನುಮೋದನೆ ನೀಡಿತು.**

**ವಿಷಯ 4: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ವೇತನಶ್ರೇಣಿ ಬೋಧಕ ಹುದ್ದೆಗಳ ಪರೀಕ್ಷಣೆ ಅವಧಿ (Probation Period) ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಯುಜಿಸಿ ವೇತನಶ್ರೇಣಿಯ ಇಬ್ಬರು ಪ್ರಾಧ್ಯಾಪಕರು ಹಾಗೂ 10 ಸಹಾಯಕ ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದು, ಇವರ ನೇಮಕಾತಿ ಆದೇಶದಲ್ಲಿ ಎರಡು ವರ್ಷಗಳ ಕಾಲ ಪರೀಕ್ಷಣೆ ಅವಧಿಯನ್ನು ನಿಗದಿಗೊಳಿಸಲಾಗಿತ್ತು. ಆದರೆ, 'UCG Regulations on minimum qualifications for appointment of teachers and other academic staffs in Universities and Colleges and measures for the maintenance of standards in Higher Education 2010'ರಂತೆ ಪರೀಕ್ಷಣೆ ಅವಧಿಯು ಒಂದು ವರ್ಷಕ್ಕೆ ಮಾತ್ರ ನಿಗದಿಗೊಳಿಸಲಾಗಿದೆ. ಇದನ್ನು GAZATTE OF INDIA, PART III, Sector IV, ನಲ್ಲಿಯೂ ಪ್ರಕಟಿಸಲಾಗಿದೆ.

Proceedings of the Government of Karnataka, Subject: Extension of 2006 Revised UGC/ICAR Payscales to Teachers, Librarians and equivalent cadres in Agricultural and Horticultural Universities in Karnataka; dated 24.03.2010 ರಲ್ಲಿಯೂ ಪರೀಕ್ಷಣೆ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಗೊಳಿಸಲಾಗಿದೆ. ಇತರ ವಿಶ್ವವಿದ್ಯಾಲಯಗಳಲ್ಲೂ ಪರೀಕ್ಷಣೆ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳಿಗೆ ನೇಮಕಗೊಂಡಿರುವ ಸಿಬ್ಬಂದಿಗಳ ಪರೀಕ್ಷಣೆ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಪಡಿಸಬೇಕಾಗಿದೆ. ಈ ಕೆಳಕಂಡಂತೆ ನಿಬಂಧನೆಗಳನ್ನು ವಿಧಿಸಬಹುದಾಗಿದೆ.

- ಬೋಧಕ ನೌಕರನು ಹುದ್ದೆಗೆ ಸೇರಿದ ದಿನಾಂಕದಿಂದ ಒಂದು ವರ್ಷಕ್ಕೆ ಸರಿಯಾಗಿ ಪರೀಕ್ಷಣೆ ಅವಧಿಯು ಮುಗಿಯುವುದರಿಂದ, ವಿಶ್ವವಿದ್ಯಾಲಯವು ಬೋಧಕ ನೌಕರನನ್ನು ಖಾಯಂಗೊಳಿಸುವ ವಿಷಯವಾಗಿ ಪ್ರಶಾಸನ ಸಭೆಯಲ್ಲಿ ಪರೀಕ್ಷಣೆ ಅವಧಿಯು ಮುಗಿಯುವ 40 ದಿನಗಳ ಮುಂಚೆಯೇ ವಿಷಯವನ್ನು ಮಂಡಿಸತಕ್ಕದ್ದು.
- ಒಂದು ವೇಳೆ ಪ್ರಶಾಸನ ಸಮಿತಿಯು ನಿರ್ದಿಷ್ಟ ಬೋಧಕ ನೌಕರನನ್ನು ಖಾಯಂಗೊಳಿಸದೆ ಪರೀಕ್ಷಣೆ ಅವಧಿಯನ್ನು ಮುಂದುವರಿಸಬೇಕೆಂಬ ನಿರ್ಧಾರಕ್ಕೆ ಬಂದರೆ, ಅದಕ್ಕೆ ಸರಿಯಾದ ಕಾರಣಗಳನ್ನು ತಿಳಿಸತಕ್ಕದ್ದು. ಅಲ್ಲದೇ, ಈ ನಿರ್ಧಾರಕ್ಕೆ ಪ್ರಶಾಸನ ಸಮಿತಿಯ 2/3 ಬಹುಮತ ಇರತಕ್ಕದ್ದು. ಇವು ಇಲ್ಲವಾದಲ್ಲಿ ಬೋಧಕ ನೌಕರನನ್ನು ಖಾಯಂಗೊಳಿಸದೆ ಇರಲಾಗದು. ಪ್ರಶಾಸನ ಸಮಿತಿಯ ನಿರ್ಧಾರವನ್ನು, ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಬೋಧಕ ನೌಕರನಿಗೆ ಕೂಡಲೇ ತಿಳಿಸತಕ್ಕದ್ದು.
- ಈ ಸಂಬಂಧ ಯಾವುದೇ ಕ್ರಮ ಕೈಗೊಳ್ಳದೇ ಹೋದಲ್ಲಿ, ಬೋಧಕನು ಯಾವುದೇ ನಿರ್ಬಂಧನೆಗಳಿಲ್ಲದೇ ಖಾಯಂ ನೌಕರನಾಗಿ ಸ್ಥಿರಗೊಳ್ಳತಕ್ಕದ್ದು.

ನಿರ್ಣಯ: **ಸಭೆಯು ಮೇಲ್ಕಂಡ ವಿವರಗಳನ್ನು ಪರಿಶೀಲಿಸಿತು. ಯುಜಿಸಿ ವೇತನಶ್ರೇಣಿಯ ಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕರ ಪರೀಕ್ಷಣೆ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಗೊಳಿಸಿ ಆದೇಶ ನೀಡಲು ಸಭೆಯು ಅನುಮೋದಿಸಿತು.**

**ವಿಷಯ 5: ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವ್ಯಾಕರಣಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಡಾ. ಪ್ರಭುಲಿಂಗ ಹೆಬ್ಬಾಳ ಅವರ ವಿರುದ್ಧ ರಾಜ್ಯ ಮಹಿಳಾ ಆಯೋಗದಲ್ಲಿ ದೂರು ದಾಖಲಿಸುವ ಬಗೆಗೆ.**

ಟಿಪ್ಪಣಿ: ಘನತೆವೆತ್ತ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡ ಪ್ರಶಾಸನ ಸಮಿತಿ ಸದಸ್ಯರಾದ ಪ್ರೊ. ಎನ್. ಅಶ್ವತ್ಥಮ್ಮ ಅವರು, ದಿನಾಂಕ: 17.02.2014ರಂದು ಮಧ್ಯಾಹ್ನ 12.30ರಿಂದ 1.30ರವರೆಗೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಾಕರಣಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಡಾ. ಪ್ರಭುಲಿಂಗ ಹೆಬ್ಬಾಳ ಅವರು 9739713623 ಸಂಖ್ಯೆಯಿಂದ ತಮಗೆ ದೂರವಾಣಿ ಕರೆ ಮಾಡಿ ಅವಹೇಳನಕಾರಿಯಾಗಿ ಮಾತನಾಡಿದ್ದಲ್ಲದೇ, ಅಸಹ್ಯ ರೀತಿಯ ವರ್ತನೆಯನ್ನು ಮಾತಿನ ಮೂಲಕ ವರ್ತಿಸಿರುವುದರ ಬಗೆಗೆ ಸಭೆಯ ಮುಂದೆ ತಿಳಿಸಿದರು. ದೂರವಾಣಿಯಲ್ಲಿ ಮಾತನಾಡಿದ ವಿಷಯಗಳನ್ನು ಸಭೆಯ ಗಮನಕ್ಕೆ ತಂದುದಲ್ಲದೆ, ಡಾ. ಪ್ರಭುಲಿಂಗ ಹೆಬ್ಬಾಳ ಅವರ ವಿರುದ್ಧ ರಾಜ್ಯ ಮಹಿಳಾ ಆಯೋಗದಲ್ಲಿ ದೂರನ್ನು ದಾಖಲಿಸುವ ಬಗೆಗೆ ಸಭೆಗೆ ತಿಳಿಸಿದರು. ಈ ಸಂಬಂಧವಾಗಿ ಮುಂದಿನ ಪ್ರಶಾಸನ ಸಮಿತಿ ಸಭೆಗೆ ಡಾ. ಪ್ರಭುಲಿಂಗ ಹೆಬ್ಬಾಳ ಅವರನ್ನು ಕರೆಸಿ ಶಿಸ್ತುಕ್ರಮ ಕೈಗೊಳ್ಳಬೇಕೆಂದು ನಿವೇದಿಸಿದರು.

ನಿರ್ಣಯ: **ಸಭೆಯು ಈ ವಿಷಯವನ್ನು ಗಂಭೀರವಾಗಿ ಪರಿಶೀಲಿಸಿತು. ರಾಜ್ಯ ಮಹಿಳಾ ಆಯೋಗಕ್ಕೆ ದೂರನ್ನು ದಾಖಲಿಸುವ ಬಗೆಗೂ ಮುಂದಿನ ಪ್ರಶಾಸನ ಸಮಿತಿ ಸಭೆಗೆ ಡಾ. ಪ್ರಭುಲಿಂಗ ಹೆಬ್ಬಾಳ ಅವರನ್ನು ಕರೆಸಿ ಶಿಸ್ತುಕ್ರಮ ವಹಿಸಲೂ ಸಭೆ ನಿರ್ಣಯಿಸಿತು.**

**ಮಾನ್ಯ ಕುಲಪತಿಗಳಿಂದ ನಡಾವಳಿಯ ಕರಡುಪ್ರತಿ ಅನುಮೋದನೆಗೊಂಡಿದೆ.**

**ವಿದ್ವಾನ್ ಪಿ.ಆರ್. ಪಾಗೋಜಿ**
ಉಪಕುಲಸಚಿವರು